

ಫ್ಯಾಷನ್

ಉಡುಗೆ ಸಾಂಪ್ರದಾಯಕವೇ ಇರಲಿ, ಆಧುನಿಕವೇ ಆಗಲಿ, ಆ ಉಡುಗೆಗೆ ಹೊಂದುವಂತಹ ಆಭರಣ, ಚಪ್ಪಲಿ, ಬ್ಯಾಗ್, ಪರ್ಸ್‌ಗಳಿದ್ದರೆ ಧರಿಸಿದವರ ಒಟ್ಟಾರೆ ನೋಟವೇ ಅದ್ಭುತವಾಗಿ ಬದಲಾಗಿ ಬಿಡುತ್ತದೆ.

■ ಎಸ್ಸೆಚ್

# ಅಂದದ ಉಡುಗೆಗೆ ಚೆಂದದ ಅನುಬಂಧ





ವ್ಯಕ್ತಿತ್ವಕ್ಕೆ ಇನ್ನಷ್ಟು ಮೆರುಗು ನೀಡುವುದು ವ್ಯಕ್ತಿಯ ಒಟ್ಟಾರೆ ನೋಟ. ಅಂದದ ಉಡುಪು, ಚೆಂದದ ಆಭರಣ, ಅದಕ್ಕೆ ಕುಂದಣವಿಟ್ಟಂತೆ ಒಪ್ಪುವ ಮೇಕಪ್, ಹೊಂದುವ ಪರಿಕರಗಳು... ಉಡುಪು ಆಧುನಿಕವಾಗಿರಲಿ ಅಥವಾ ಸೀರೆಯಂತಹ ಸಾಂಪ್ರದಾಯಕ ವಸ್ತ್ರವಾಗಿರಲಿ ಅವುಗಳಿಗೆ ಹೊಂದುವಂತಹ ಆ್ಯಕ್ಸೆಸರಿಗಳಿದ್ದರೆ ವ್ಯಕ್ತಿತ್ವ ಎದ್ದು ಕಾಣುವಂತಿರುತ್ತದೆ.

ಆಭರಣ, ಬ್ಯಾಗ್ ಅಥವಾ ಕ್ಲಚ್ ಅಥವಾ ಪೋಟ್ಲಿ, ಪಾದಗಳಿಗೆ ಸೌಂದರ್ಯದ ಎರಕ ಹೊಯ್ಯುವ ಚಪ್ಪಲಿ, ಶೂ, ಸಿಲ್ವೌಟ್, ವೆಜ್ಜ್ ಎಲ್ಲವನ್ನೂ ಹೊಂದಿಸಿಕೊಂಡ ನಂತರವೇ ಉಡುಗೆಯನ್ನು ಧರಿಸುವುದು ಯುವತಿಯರಲ್ಲಿ ಮಾತ್ರವಲ್ಲ, ಕಾಲೇಜು ಹುಡುಗಿಯರಲ್ಲೂ ಟ್ರೆಂಡ್ ಆಗಿಬಿಟ್ಟಿದೆ.

ಆಭರಣಗಳನ್ನೇ ತೆಗೆದುಕೊಳ್ಳಿ. ಕಿವಿ, ಕತ್ತು, ಕೈಗಳಿಗೆ ಒಂದೇ ತೆರನಾದ ವಿನ್ಯಾಸ ಇರುವ ಆಭರಣಗಳು ಈಗ ಎಲ್ಲೆಡೆ ಲಭ್ಯ. ಆದರೆ ಅವುಗಳನ್ನು ಧರಿಸುವ ಉಡುಪಿಗೆ ಹೊಂದಿಸಿಕೊಳ್ಳುವುದೂ ಒಂದು ಕಲೆ. ಜಂಕ್ ಆಭರಣಗಳು ಅಂದರೆ ಕಡಿಮೆ ಬೆಲೆಯ ಗಾಜು, ಮರ, ಮಣ್ಣು, ಚಿಪ್ಪು, ಪ್ಲಾಸ್ಟಿಕ್ ಮೊದಲಾದವುಗಳಿಂದ ತಯಾರಾದ ಆಭರಣಗಳು ಚೆಂದ ಕಾಣುತ್ತವೆ. ಆದರೆ ಇವು ಕೆಲವೊಮ್ಮೆ ಕುಸುರಿ ಮಾಡಿದ, ದುಬಾರಿ ಉಡುಪುಗಳನ್ನು ಮಂಕಾಗಿಸಿ ಬಿಡುತ್ತವೆ. ಹೀಗಾಗಿ ತೀರಾ ದುಬಾರಿಯೂ ಅಲ್ಲದ, ಆದರೆ ಅದ್ಭುತವಾಗಿ ಕಾಣುವ ಮುತ್ತು, ಹವಳ, ಓನಿಕ್ಸ್, ಜೇಡ್, ಜಾಸ್ಪರ್, ಅಗೇಟ್, ಕ್ರಿಸ್ಟಲ್ ಮೊದಲಾದ ಅರೆ ಅಮೂಲ್ಯ ಹರಳುಗಳ ಆಭರಣಗಳು ವಸ್ತ್ರಕ್ಕೆ ವೈಭವದ ಹೊದಿಕೆ ತೊಡಿಸುತ್ತವೆ.



ಹತ್ತಿಯ ಕಡು ಹಸಿರಿನ ಸೀರೆಗೆ ಕೆಂಪಂಚು ಇದ್ದರೆ ಹಸಿರು ವರ್ಣದ ಜೇಡ್ ಮಣಿಗಳ ಸರ ಮೆರುಗನ್ನು ನೀಡುವುದರಲ್ಲಿ ಸಂಶಯವೇ ಇಲ್ಲ. ಆದರೆ ಈ ಸರಕ್ಕೆ ಚಿನ್ನದ ರೇಖು ಇಲ್ಲದಂತೆ ಎಚ್ಚರ ವಹಿಸಿ. ಅದೇನಿದ್ದರೂ ಚಿನ್ನದ ಅಂಚಿನ ರೇಷ್ಮೆ ಸೀರೆಗೆ ಸರಿ. ಹತ್ತಿಯ ಬಟ್ಟೆ ಸಾಂಪ್ರದಾಯಕ ದೇಸಿ ಲುಕ್ ನೀಡುವುದರಿಂದ ಸರಕ್ಕೆ ಆಕ್ಸಿಡೈಸ್ ಮಾಡಿದ ಬಿಳಿಯ ಲೋಹದ ಗುಂಡುಗಳಿದ್ದರೆ ಎಥ್ನಿಕ್ ಲುಕ್ ತನ್ನಿಂದ ತಾನೇ ಬಂದು ಬಿಡುತ್ತದೆ. ಇದರ ಜೊತೆ ಕೆಂಪು ಜೇಡ್ ಅಥವಾ ಚೆರ್ರಿ ಸ್ಫಟಿಕಗಳನ್ನು ಮಿಕ್ಸ್ ಮಾಡಬಹುದು.

ಉಡುಪಿನ ಬಣ್ಣದ್ದೇ ಆಭರಣಗಳ ಬದಲಾಗಿ ಕಾಂಟ್ರಾಸ್ಟ್ ಆಗಿ ಕಾಣುವಂತಹ ಬಣ್ಣಗಳ ಪ್ರಯೋಗವನ್ನೂ ಮಾಡಬಹುದು. ಆದರೆ ಈ ರೀತಿ ಹೊಂದಿಸುವಾಗ ಹೆಚ್ಚಿನ ಪರಿಣತಿ ಅಗತ್ಯ. ತಿಳಿ ಹಳದಿ ಉಡುಪಿಗೆ ಮುತ್ತಿನ ಸರ ಎದ್ದು ಕಾಣುತ್ತದೆ. ಕ್ರಿಸ್ಟಲ್ ಕೂರಿಸಿದ ಸೀರೆ, ಎಥ್ನಿಕ್ ಚೂಡಿದಾರ್ ಜೊತೆಗೆ ಕ್ರಿಸ್ಟಲ್ ನೆಕ್ಲೇಸ್ ಧರಿಸಿದರೆ ಉತ್ತಮ.

ಕತ್ತಿನ ಆಭರಣಗಳಂಥದ್ದೇ ಕಿವಿಯೋಲೆಗಳು ಇದ್ದರೆ ಇನ್ನೂ ಚೆನ್ನ. ಹಾಗೇ ಕೈಗಳಿಗೂ ಅಂಥದ್ದೇ ಬಳೆಗಳು ಲಭ್ಯ. ನಿತ್ಯ ಧರಿಸುವ ಕ್ಯಾಸುವಲ್ ಸೀರೆ/ ಉಡುಪುಗಳಾದರೆ ಒಂದೇ ಒಂದು ದಪ್ಪ ಬಿಳಿ ಲೋಹದ ಬಳೆ ಧರಿಸಬಹುದು. ಆದರೆ ಮದುವೆ, ಪಾರ್ಟಿಗೆ ಧರಿಸುವ ಉಡುಪುಗಳಿಗೆ ಹೊಳೆಯುವ ಕ್ರಿಸ್ಟಲ್, ಜೈಪುರ ಹರಳುಗಳ ಬಳೆಗಳು ಚಮಕ್ ನೀಡುತ್ತವೆ. ಕಾಲಿಗೆ ಬೆಳ್ಳಿಯ ಅಥವಾ ಮಣಿಗಳ ಕಾಲ್ಗೆಜ್ಜೆ ಕೂಡಾ ಧರಿಸಬಹುದು.

ಫ್ಯಾನ್ಸಿ ಸೀರೆಗೆ ಕ್ಲಚ್ ಪರ್ಸ್ ಅಥವಾ ಪೋಟ್ಲಿ ಹೊಂದಿಕೊಳ್ಳುತ್ತದೆ. ಕ್ರಿಸ್ಟಲ್ ಕೂರಿಸಿದ ಕ್ಲಚ್ ಪರ್ಸ್ ಈಗ ಬಹು ಜನಪ್ರಿಯ. ಕ್ಯಾಸುವಲ್ ಸೀರೆಗಳಿಗೆ, ಆಧುನಿಕ ಉಡುಪುಗಳಿಗೆ ಹ್ಯಾಂಡ್‌ಬ್ಯಾಗ್, ಉದ್ದನೆಯ ಹಿಡಿಕೆ ಇರುವ ಸ್ಲಿಂಗ್ ಬ್ಯಾಗ್ ಸರಿ.

ಎಲ್ಲವನ್ನೂ ಹೊಂದಿಸಿಕೊಂಡ ಮೇಲೆ ಚಪ್ಪಲಿಗಳ ಕಡೆಗೂ ಒಂದಿಷ್ಟು ಗಮನ ನೀಡಿ. ಸೀರೆಯಾದರೆ ಎತ್ತರ ಹಿಮ್ಮಡಿಯ ಚಪ್ಪಲಿ ನಡಿಗೆಗೆ ಕ್ಯಾಟ್‌ವಾಕ್ ರೀತಿಯ ಅಂದ ನೀಡುತ್ತದೆ. ಸ್ಕರ್ಟ್‌ನಂತಹ ಆಧುನಿಕ ಉಡುಪಾದರೆ ವೆಜ್ಜ್, ಎತ್ತರ ಹಿಮ್ಮಡಿಯ ಪಟ್ಟಿ ಇರುವ ಸ್ಯಾಂಡಲ್ಸ್ ಹೊಂದಿಕೊಳ್ಳುತ್ತವೆ. ಜೀನ್ಸ್ ಮತ್ತು ಮುಕ್ಕಾಲು ಕಾಲಿನ ಕ್ಯಾಪ್ರಿಗೆ ಚಪ್ಪಟೆಯ ಫ್ಲಿಪ್ ಫ್ಲಾಪ್ ಸೂಕ್ತ. ■